ಬಿ) ವರ್ಷಕ್ಕೆ ವಸೂಲಾದ ಬಾಡಿಗೆ :

ಸಿ) ಯಾವ ಉದ್ದೇಶಕ್ಕಾಗಿ ಬಾಡಿಗೆಯಿಂದ ಬಂದ ಹಣವನ್ನು ಉಪಯೋಗಿಸಲಾಗಿದೆ ?

ಶ್ರೀ ಆಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಎ) ವಿವಿಧ ವಕ್ಫ್ ಸಂಸ್ಥೆಗಳು 1985 ರಿಂದ ಈ ರಾಜ್ಯದಲ್ಲಿ 23 ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಆದರಲ್ಲಿ. 8 ವಾಣಿಜ್ಯ ಸಂಕೀರ್ಣಗಳ ನಿರ್ಮಾಣ ಕಾರ್ಯವು ಸಂಪೂರ್ಣಗೊಂಡಿದೆ.

ಬಿ) 1) ಕರ್ನಾಟಕ ವಕ್ಫ್ ಕಛೇರಿ ಸಂಕೀರ್ಣ "ದಾರುಲ್ ಅರ್‌ಕಾಫ್ ಕಟ್ಟಡ" ಬೆಂಗಳೂರು ಇದರಿಂದ ವರ್ಷಕ್ಕೆ ರೂ. 10,30,960-00 ಬಾಡಿಗೆ ವಸೂಲಾಗುತ್ತಿದೆ.

2) ಬೇರೆ ಇತರೆ 7 ವಾಣಿಜ್ಯ ಸಂಕೀರ್ಣಗಳಿಂದ ವರ್ಷಕ್ಕೆ ಬಾಡಿಗೆ ಮೊತ್ತ ಕೂಡಲೇ ಲಭ್ಯವಿಲ್ಲ.

ಸಿ) 1) ಕರ್ನಾಟಕ ವಕ್ಫ್ ಕಛೇರಿಯ ಸಂಕೀರ್ಣವು ಕೇಂದ್ರ ವಕ್ಫ್ ಕೌನ್ಸಿಲ್‌ನಿಂದ ಪಡೆದ ಸಾಲದ ಜವಾಬ್ದಾರಿಯನ್ನು ತೀರಿಸಲಾಗುತ್ತಿದೆ. ಹಾಗೆಯೇ. ವಕ್ಫ್ ಸಂಕೀರ್ಣದ ನಿರ್ವಹಣೆ ಮತ್ತು ರಿಪೇರಿಗೆ ಮತ್ತು ಬೆಂಗಳೂರು ನಗರ ಮಹಾನಗರಪಾಲಿಕೆಗೆ ಕೊಡಬೇಕಾದ ಆಸ್ತಿ ತೆರಿಗೆಯನ್ನು ಈ ವರಮಾನದಿಂದ ಕೊಡಲಾಗುತ್ತಿದೆ.

2) ಇತರೆ 7 ವಾಣಿಜ್ಯ ಸಂಕೀರ್ಣಗಳು ಯಾವ ಕಾರ್ಯಗಳಿಗೆ ತಮ್ಮ ವಸೂಲಾದ ಬಾಡಿಗೆಯ ಹಣವನ್ನು ಉಪಯೋಗಿಸುತ್ತಿವೆ ಎಂಬುದು ಕೂಡಲೇ ಲಭ್ಯವಿಲ್ಲ.

ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಸೀಟುಗಳ ಮಾಸಲಾತಿ ಬಗ್ಗೆ

1636. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವ ಸಂದರ್ಭದಲ್ಲಿ ಈಗಿರುವ ನಿಯಮಗಳಿಗನುಗುಣವಾಗಿ (ಮೆರಿಟ್ ಮೇಲೆ) ಸ್ಥಳೀಯ ಮತ್ತು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಸೀಟು ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಶೇ. 50 ಸೀಟುಗಳನ್ನು ಸ್ಥಳೀಯ ಮತ್ತು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ದೊರಕುವಂತೆ ಸರ್ಕಾರವು ಕ್ರಮ ಕೈಗೊಳ್ಳುವುದೇ :

ಇ) ಹಾಗಿದ್ದಲ್ಲಿ ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಇಲ್ಲ.

ಅ) ಪ್ರತಿ ಪಾಲಿಟೆಕ್ನಿಕ್‌ನ ಪ್ರವೇಶ ಸಂಖ್ಯೆಯ ಜನರಲ್ ಮೆರಿಟ್ ಸ್ಥಾನಗಳ ಪೈಕಿ, ಶೇ. 25 ರಷ್ಟು ಪ್ರವೇಶಗಳನ್ನು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಮೀಸಲಾಗಿಟ್ಟಿರುತ್ತದೆ. ಉಳಿದ ಶೇ. 75ರಷ್ಟು ಸ್ಥಾನಗಳು ಇತರರಿಗೆ ಕೊಡಲಾಗುತ್ತಿದೆ. ಆದ್ದರಿಂದ ಈಗ ಜಾರಿಯಲ್ಲಿರುವ ಪದ್ಧತಿಗೆ ತಿದ್ದುಪಡಿಯ ಅಗತ್ಯವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕ.ರಾ.ರ.ಸಾ. ಸಂಸ್ಥೆಯು ಖರೀದಿಸಿದ ಯಂತ್ರೋಪಕರಣಗಳ ಒಟ್ಟು ಮೌಲ್ಯದ ಬಗ್ಗೆ

1771. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕ.ರಾ.ರ.ಸಾ. ಸಂಸ್ಥೆಯು 1991 ಜನವರಿಯಿಂದ ಡಿಸೆಂಬರ್‌ವರೆಗೂ ಬಿಡಿಭಾಗಗಳು ಹಾಸಿ, ಟೈರು ಟ್ಯೂಬುಗಳನ್ನು ಖರೀದಿಸಿದ ಒಟ್ಟು ಮೌಲ್ಯವೆಷ್ಟು ;

ಆ) ಖರೀದಿ ಮಾಡಲು ಕೊಟೇಷನ್ ಕರೆಯಲಾಗಿದೆಯೇ :

ಇ) ಈ ಖರೀದಿಯನ್ನು ಖರೀದಿ ಮತ್ತು ಉಗ್ರಾಣ ಇಲಾಖೆ, ಕೆಎಸ್‌ಜಿಎಂಸಿ, ಡಿಜಿಎಸ್‌ಡಿ. ಯಲ್ಲಿ ಅಧಿಕೃತವಾಗಿ ನಮೂದಿಸಿದ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆಯೇ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ಕ.ರಾ.ರ.ಸಾ. ಸಂಸ್ಥೆಯು 1991ರಲ್ಲಿ ಬಿಡಿಭಾಗಗಳು, ಚಾಸಿಗಳು, ಟೈರು, ಟ್ಯೂಬುಗಳ ಒಟ್ಟು ಮೌಲ್ಯ ಕೆಳಗಿನಂತಿದೆ.

	ಕೋಟಿ ರೂ.ಗಳಲ್ಲಿ
ಬಿಡಿ ಭಾಗಗಳು	15.70
ಚಾಸಿಗಳು	36.26
ಟೈರು ಮತ್ತು ಟ್ಯೂಬುಗಳು	24.00

ಆ) ಕ.ರಾ.ರ.ಸಾ. ಸಂಸ್ಥೆಯು ಮೂರು ವಿಧಾನದ ಖರೀದಿಯನ್ನು ಅನುಸರಿಸುತ್ತವೆ. ಅವುಗಳೆಂದರೆ ಏಕಸ್ವಾಮ್ಯ ಒಡೆತನ, (ರೇಟ್ ಕಂಟ್ರಾಕ್ಟ್) ದರ ಸಂವಿದ ಹಾಗು ಟೆಂಡರ್‌ನಂತೆ ಖರೀದಿ.

ಏಕಸ್ವಾಮ್ಯ ಒಡೆತನದ ಬಿಡಿಭಾಗಗಳನ್ನು ಅದರ ತಯಾರಕರಾದ ಮೈಕೋ, ಟೆಲ್ಕೋ, ಲೇಲ್ಯಾಂಡ್, ಲ್ಯೂಕಾಸ್, ಟಿವಿಎಸ್, ಇವರಿಂದ ಬೆಲೆ ಪಟ್ಟಿ ಆಧಾರದ ಮೇಲೆ ಖರೀದಿಸಲಾಗುವುದು.

ದರ ಸಂವಿದ ಬಿಡಿಭಾಗಗಳನ್ನು ಎ.ಎಸ್.ಆರ್.ಟಿ. ಯು (ದೆಹಲಿ ಭೂಸಾರಿಗೆ ಅಧೀನಕ್ಕೊಳಪಟ್ಟ ನಿಗಮ) ನಿರ್ಧರಿಸಿದ ದರ ಸಂವಿದಯಂತೆ ತುಲನೆ ಮಾಡಿ ಗುಣಮಟ್ಟದ ಆಧಾರದ ಮೇಲೆ ಖರೀದಿಸಲಾಗುವುದು.